For More JobNews Visit: www.kpscvaani.com

ನೋಂದಣಿ ಸಂಖ್ಯೆ:-12/1964-65 ದಿನಾಂಕ-28-09-1964 ಕಛೇರಿ: 0816-2206458



ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆ (ರಿ.)

ಸಿದ್ಧಾರ್ಥನಗರ ಅಂಚೆ, ತುಮಕೂರು ತಾಲ್ಲೂಕು, ತುಮಕೂರು ಜಿಲ್ಲೆ-572107

ಸಂಖ್ಯೆ:-ಶ್ರೀಸಿಶಿಸಂ/ದೈಶಿನೇಮಾ/2021-22 ದಿನಾಂಕ :03-01-2022

ನೇಮಕಾತಿ ಪ್ರಕಟಣೆ

ಉಪನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ ತುಮಕೂರು ಇವರ ಪತ್ರದ ಸಂಖ್ಯೆ ಪಪೂಶಿಇ/ಉನಿ/ಯುಯು/ದೈಶಿನೇಮಕ/2021-22/20 ದಿನಾಂಕ 17-12-2021 ರ ಪತ್ರದಲ್ಲಿ ನೀಡಿರುವ ಅನುಮತಿ ಅನುಸಾರ ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆ(ರಿ) ಸಿದ್ಧಾರ್ಥನಗರ, ತುಮಕೂರು ತಾಲ್ಲೂಕು ಮತ್ತು ತುಮಕೂರು ಜಿಲ್ಲೆ. ಈ ಸಂಸ್ಥೆಯ ಅಡಿಯಲ್ಲಿ ನಡೆಯುತ್ತಿರುವ 1) ಶ್ರೀ ಸಿದ್ಧಾರ್ಥ ಪದವಿ-ಪೂರ್ವ ಕಾಲೇಜು, ಮಧುಗಿರಿ, ತುಮಕೂರು ಜಿಲ್ಲೆ, 2) ಶ್ರೀ ಸಿದ್ಧಾರ್ಥ ಪದವಿ-ಪೂರ್ವ ಕಾಲೇಜು, ಕುಣಿಗಲ್, ತುಮಕೂರು ಜಿಲ್ಲೆ 3) ಶ್ರೀ ಸಂಘಮಿತ್ರೆ ಮಹಿಳಾ ಪದವಿ-ಪೂರ್ವ ಕಾಲೇಜು, ವಿಜಯನಗರ, ಬೆಂಗಳೂರು ಈ ಅನುದಾನಿತ ಪದವಿ-ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ದೈಹಿಕ ಶಿಕ್ಷಣ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಖಾಲಿ ಹುದ್ದೆಗಳ ವಿವರ ಈ ಕೆಳಕಂಡಂತಿದೆ.

ಖಾಲಿ ಹುದ್ದೆಗಳ ವಿವರ ಮತ್ತು ಮೀಸಲಾತಿ

ಕ್ರ.ಸಂ	ಒಟ್ಟು ಹುದ್ದೆಗಳು	ಪರಿಶಿಷ್ಟ ಜಾತಿ	ಸಾಮಾನ್ಯ ಅಭ್ಯರ್ಥಿ	ಪರಿಶಿಷ್ಟ ವರ್ಗ
1	2	3	4	5
01	03 [ಮೂರು]	01 [ಒಂದು]	01 [ಒಂದು]	01 [ಒಂದು]

ವಿಶೇಷ ಸೂಚನೆಗಳು :-

ಮೇಲ್ಕಾಣಿಸಿದ ಮೀಸಲಾತಿ ಅನುಸಾರ ಅಭ್ಯರ್ಥಿಗಳು ತಮ್ಮ ವೈಯಕ್ತಿಕ ಮಾಹಿತಿಗಳೊಂದಿಗೆ (Bio-data/Resume) ಅರ್ಜಿಯನ್ನು ಸಲ್ಲಿಸಬಹುದು.

ವಿದ್ಯಾರ್ಹತೆ:

1. ಅಂಗೀಕೃತ ವಿಶ್ವವಿದ್ಯಾಲಯದಲ್ಲಿ ಪಡೆದ ಯಾವುದಾದರೂ ಪದವಿ ಅಥವ ಅದಕ್ಕೆ ತತ್ಸಮಾನವಾದ ವಿದ್ಯಾರ್ಹತೆಯೊಂದಿಗೆ B.PEd ಮತ್ತು M.PEd ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿಬೇಕು.
2. ವಯೋಮಿತಿ:- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ದವರಿಗೆ ಗರಿಷ್ಠ 45 ವರ್ಷಗಳು ಮತ್ತು ಸಾಮಾನ್ಯ ಅಭ್ಯರ್ಥಿಗಳಿಗೆ ಗರಿಷ್ಠ 40 ವರ್ಷಗಳು ಇರುತ್ತದೆ.
3. ಅರ್ಜಿ ಸಲ್ಲಿಸುವ ಸಾಮಾನ್ಯ ಅಭ್ಯರ್ಥಿಗಳು ಅರ್ಜಿಯೊಂದಿಗೆ ನಿಗಧಿಪಡಿಸಲಾದ ಅಂತಿಮ ದಿನಾಂಕದೊಳಗೆ ಇರುವಂತೆ 300/- ರೂಪಾಯಿಗಳ DD ಯನ್ನು ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಅಭ್ಯರ್ಥಿಗಳು 100/-ರೂಪಾಯಿಗಳ DD ಯನ್ನು ಕಾರ್ಯದರ್ಶಿಗಳು, ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆ, ಸಿದ್ಧಾರ್ಥನಗರ, ತುಮಕೂರು ತಾಲ್ಲೂಕು. ಇವರ ಹೆಸರಿಗೆ ಅಧಿಕೃತ ಬ್ಯಾಂಕ್ ನಿಂದ ಪಡೆದು ಸಲ್ಲಿಸಬೇಕು.
4. ಅಭ್ಯರ್ಥಿಗಳು Resume ನಲ್ಲಿ ತಮ್ಮ ಹೆಸರು, ಹುಟ್ಟಿದ ದಿನಾಂಕ, ತಂದೆಯ/ತಾಯಿಯ ಹೆಸರು, ವಿಳಾಸ, ವಿದ್ಯಾರ್ಹತೆ, ಭೋದನಾನುಭವ, ಜಾತಿ ಮತ್ತು ಉಪಜಾತಿ, ದೂರವಾಣಿಸಂಖ್ಯೆ, ವಿವರಗಳನ್ನು ನಮೂದಿಸಬೇಕು. ಹಾಗೂ ಯಾವ ವರ್ಗಕ್ಕೆ ಅರ್ಜಿ ಸಲ್ಲಿಸಿದೆ ಎಂಬುದನ್ನು ನಮೂದಿಸಬೇಕು.
5. ಅಭ್ಯರ್ಥಿಗಳು ವಿದ್ಯಾರ್ಹತೆಗೆ ಸಂಬಂಧ ಪಟ್ಟಂತೆ ದೃಢೀಕೃತ SSLC, PUC ಮತ್ತು ಪದವಿಯ ಎಲ್ಲಾ ಸೆಮಿಸ್ಟರ್‌ಗಳ ಹಾಗೂ B.PEd ಮತ್ತು M.PEd ಅಂಕಪಟ್ಟಿಗಳು ಮತ್ತು ಆಯಾ ವಿಶ್ವವಿದ್ಯಾಲಯದಿಂದ ನೀಡಲಾದ ಪ್ರಮಾಣ ಪತ್ರಗಳನ್ನು [Convocation] ಅರ್ಜಿಯೊಂದಿಗೆ ಸಲ್ಲಿಸಬೇಕು.
6. ಅಭ್ಯರ್ಥಿಗಳು ನಮ್ಮ ಸಂಸ್ಥೆಯ ಕಾರ್ಯದರ್ಶಿಗಳಿಗೆ ಸಲ್ಲಿಸುವ ಅರ್ಜಿಯಲ್ಲದೆ, ಅರ್ಜಿಯ ಪ್ರತಿಯೊಂದನ್ನು ಉಪನಿರ್ದೇಶಕರು ಪದವಿ-ಪೂರ್ವ ಶಿಕ್ಷಣ ಇಲಾಖೆ ತುಮಕೂರು ಇವರಿಗೆ ಸಲ್ಲಿಸಬೇಕು.
7. ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ಅಭ್ಯರ್ಥಿಗಳು ದೃಢೀಕೃತ ಮತ್ತು ಸ್ಪಷ್ಟತೆಯುಳ್ಳ ಜಾತಿ ಪ್ರಮಾಣಪತ್ರದ ಪ್ರತಿಯನ್ನು ಲಗತ್ತಿಸಬೇಕು.
8. ಸರ್ಕಾರದ ನಿಯಮದನ್ವಯ ಅಭ್ಯರ್ಥಿ ಆಯ್ಕೆಯು ಅನುದಾನ ರಹಿತವಾಗಿದ್ದು ಇಲಾಖೆಯ ಅನುಮೋದನೆ ನಂತರ ಅನುದಾನಕ್ಕೊಳಪಡಿಸಲಾಗುವ ಷರತ್ತಿಗೆ ಒಳಪಟ್ಟಿರುತ್ತದೆ.
9. ಅಪೂರ್ಣ ಮಾಹಿತಿಗಳುಳ್ಳ ಹಾಗೂ ವಿಳಂಭವಾಗಿ ಸಲ್ಲಿಸಲಾಗುವ ಅರ್ಜಿಗಳನ್ನು ಯಾವುದೇ ಹಿಂಬರಹ ನೀಡದೆ ತಿರಸ್ಕರಿಸಲಾಗುವುದು.

ಮೇಲ್ಕಂಡ ಮಾಹಿತಿಯುಳ್ಳ ಅರ್ಜಿಯನ್ನು ಈ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ 21 ದಿನಗಳೊಳಗಾಗಿ ಅಥವಾ ದಿನಾಂಕ 27-01-2022 ರೊಳಗಾಗಿ ಕಾರ್ಯದರ್ಶಿಗಳು, ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆ, ಸಿದ್ಧಾರ್ಥನಗರ, ತುಮಕೂರು ತಾಲ್ಲೂಕು ಮತ್ತು ಜಿಲ್ಲೆ ಇಲ್ಲಿಗೆ ತಲುಪುವಂತೆ ಸಲ್ಲಿಸಬೇಕು.

Sd/- ಕಾರ್ಯದರ್ಶಿ
ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆ (ರಿ),
ಸಿದ್ಧಾರ್ಥನಗರ, ತುಮಕೂರು ತಾಲ್ಲೂಕು